ಸಾಕ್ಷಿಯನ್ನು ದಿನಾಂಕಃ 29-10-2024 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರು | ಸಂದೇಶ್ ಭಟ್ |
| ತಂದೆಯ ಹೆಸರು | ಸಿ ಪುರುಷೋತ್ತಮ ಭಟ್ |
| ವಯಸ್ಸು | 36 ವರ್ಷ |
| ಕೆಲಸ | ವಕೀಲರು |
| ವಾಸ | ಮೂಡಬಿದ್ರೆ |

ಮುಖ್ಯ ವಿಚಾರಣೆಃ

ನಾನು ದಿಃ 210-6-2024 ರಂದು ನ್ಯಾಯಾಲಯಕ್ಕೆ ಆಯುಕ್ತರ ವರದಿಯನ್ನು ಅದರೊಂದಿಗೆ ನಕ್ಷೆಯನ್ನು ದಾಖಲು ಮಾಡಿರುತ್ತೇನೆ ಎಂದು ಸಾಕ್ಷಿಯು ನೋಡಿ ಒಪ್ಪಿರುತ್ತಾರೆ , ಆದ ಕಾರಣ ಆಯುಕ್ತರವರದಿಯನ್ನು ನಿಸಿ-1 ಎಂದು ನಕ್ಷೆಯನ್ನು ನಿಸಿ-1(ಎ) ಎಂದು ಗುರುತಿಸಲಾಯಿತು .

ಪಾಟೀಸವಾಲುಃ ಶ್ರೀಃ ಹೆಚ್.ಎಸ್.ಎಂ ಪ್ರತಿವಾದಿ ಪರ ವಕೀಲರಿಂದಃ

ವಾದಿ ಮತ್ತು ಪ್ರತಿವಾದಿಯರ ಸ್ವತ್ತುಗಳನ್ನು ಗುರುತು ಮಾಡುವುದಕ್ಕೆ ಸಂಬಂಧಿಸಿದಂತೆ ಮತ್ತು ವಾದಿಯ ರಸ್ತೆಯ ವಿವಾದದಕ್ಕೆ ಸಂಬಂಧಿಸಿದಂತೆ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನನ್ನನ್ನು ಆಯುಕ್ತರನ್ನಾಗಿ ನೇಮಕ ಮಾಡಲಾಗಿರುತ್ತದೆ . 1ನೇ ಪ್ರತಿವಾದಿಯು ಸರ್ವೇ ನಂ. 104/1ಸಿ ರಲ್ಲಿ 1.58 ಎಕರೆ ಜಾಗದಲ್ಲಿ 35 ಸೆಂಟ್ಸ್ ನ ಜಾಗವು ವಾದಿಯವರ ಆವರಣದಲ್ಲಿ ಬರುತ್ತದೆಯೇ ಎಂದು ಗುರುತಿಸಲು ನನಗೆ ಪರಿಶೀಲನೆ ಸಮಯದಲ್ಲಿ ವರ್ಕ್ ಮೆಮೊ ನೀಡಿರುತ್ತಾರೆ ಎಂದರೆ ವರ್ಕ್ ಮೆಮೊ ನನಗೆ ನೀಡಿರುವುದರ ಬಗ್ಗೆ ನೆನಪಿಲ್ಲ .

ದಾವಾ ಆಸ್ತಿಯನ್ನು ನಾನು ಸರಿಯಾಗಿ ಅಳತೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ . ವಾದಿ ಮತ್ತು ಪ್ರತಿವಾದಿಯರ ಜಮೀನು ಒಂದಕ್ಕೊಂದು ತಾಗಿಕೊಂಡಿದೆ ಎಂದರೆ ಸರಿ. ಪ್ರತಿವಾದಿಯವರು ವಾಸಿಸುವ ಮನೆ ಮತ್ತು ತೋಟಗಳು ದಾವಾ ಸ್ವತ್ತಿನಲ್ಲಿ ಬರುತ್ತೆದೆ ಎಂದು ತಪ್ಪಾಗಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ